ಹಾಕಿಕೊಳ್ಳುತ್ತೇವೆ. ಆ ಪ್ರಕಾರ ವಸತಿ ಗೃಹಗಳ ಆಯ್ಕೆಗೆ ನಕ್ಷೆ ತಯಾರಿಸುವವರಿಗೆ ಹೇಳಿದ್ದೇವೆ.

ಶ್ರೀ ಕರಿಯಣ್ಣ:- ನಕ್ಷೆ ಏತಕ್ಕೆ? ಕಟ್ಟಡವೇ ಮಂಜೂರಾಗದಿದ್ದ ಮೇಲೆ ನಕ್ಷೆ ತಯಾರಿಸಿ ಏನು ಪ್ರಯೋಜನವಾಗುತ್ತದೆಂದು ತಾವೇ ಹೇಳಿ.

ಶ್ರೀ ಬಿ.ಶಿವಣ್ಣ:- ಸರ್ಕಾರ ಹಣ ಒದಗಿಸುವ ಪ್ರಯತ್ನ ಮಾಡುತ್ತದೆಂದು ನಾನು ಹೇಳುತ್ತಿದ್ದೇನೆ. ಈಗ ಮಾತ್ರ ನಾವು ಯಾವುದೇ ಕಟ್ಟಡಗಳನ್ನು ತೆಗೆದುಕೊಂಡಿಲ್ಲ. ರೆಂಟೆಡ್ ಬಿಲ್ಡಿಂಗ್‌ಗಳಲ್ಲಿ ನಾವು ಹಾಸ್ಟೆಲುಗಳನ್ನು ನಡೆಸುತ್ತಿದ್ದೇವೆ.

ವಿಷಯ:- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅನುದಾನಿತ ವಿದ್ಯಾರ್ಥಿನಿಲಯಗಳ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 471 (2341)

ಶ್ರೀ ಕೆ.ಸಿದ್ದಯ್ಯ:- (ಸಂತೇಮಾರನಹಳ್ಳಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.?

ಅ ರಾಜ್ಯದಲ್ಲಿರುವ ಒಟ್ಟು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಅನುದಾನಿತ ವಿದ್ಯಾರ್ಥಿನಿಲಯಗಳೆಷ್ಟು? (ವಿವರ ನೀಡುವುದು)

ಆ ಕಳೆದ 3 ವರ್ಷಗಳಿಂದ ಪ್ರತಿಯೊಂದು ಅನುದಾನಿತ ವಿದ್ಯಾರ್ಥಿನಿಲಯದಲ್ಲಿ ಸೀಟುಗಳನ್ನು ಹೆಚ್ಚಿಸಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಇ ಕಳೆದ ವರ್ಷಗಳಿಂದ ಎಷ್ಟು ಬಾರಿಗೆ ಊಟದ ವೆಚ್ಚವನ್ನು ಹೆಚ್ಚಿಸಲಾಗಿದೆ? (ವರ್ಷ ಮತ್ತು ಹೆಚ್ಚುವರಿ ಮಾಡಿದ ಹಣದ ವಿವರ ನೀಡುವುದು)

ಈ ~~ಕಳೆದ 3 ವರ್ಷಗಳಿಂದ~~ ಎಷ್ಟು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಅನುದಾನಿತ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಗಿದೆ? (ಪಟ್ಟಿಯನ್ನು ಲಗತ್ತಿಸಿ)

ಉ ಸರ್ಕಾರದ ವತಿಯಿಂದ ಖಾಸಗಿ ವಿದ್ಯಾರ್ಥಿನಿಲಯಗಳಿಗೆ ನಿವೇಶನಗಳನ್ನು ಸ್ವಾಧೀನಪಡಿಸಿಕೊಳ್ಳುವ, ಮಂಜೂರು ಮಾಡುವ, ಪುಕ್ಕಟೆಯಾಗಿ ಕೊಡುವ ಅಥವಾ ಕಡಿಮೆ ಬೆಲೆಯಲ್ಲಿ ವಿದ್ಯಾಭ್ಯಾಸದ ಏಳಿಗೆಗೋಸ್ಕರ ಒದಗಿಸುವ ಯೋಜನೆ ಇದೆಯೇ ?

ಶ್ರೀ ಬಿ.ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ ರಾಜ್ಯದಲ್ಲಿ 275 ಅನುದಾನಿತ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳಿವೆ. (ವಿವರ ಅನುಬಂಧದಲ್ಲಿ ಲಗತ್ತಿಸಿದೆ)

ಆ ಕಳೆದ ಮೂರು ವರ್ಷಗಳಿಂದ ಅನುದಾನಿತ ವಿದ್ಯಾರ್ಥಿ ನಿಲಯಗಳ ಸಂಖ್ಯೆಯನ್ನು ಈ ಕೆಳಕಂಡಂತೆ ಹೆಚ್ಚಿಸಲಾಗಿದೆ.

1989-90 - ಇಲ್ಲ

1990-91	1. ಹರಳಯ್ಯ ಉಚಿತ ಪ್ರಸಾದ ನಿಲಯ, ಇಂಡಿ, ಬಿಜಾಪುರ ಜಿಲ್ಲೆ.	7
	2. ಲೋಕಮಯ್ಯ ವಿದ್ಯಾರ್ಥಿ ನಿಲಯ, ಶೀಬಿ ಕ್ಷೇತ್ರ, ತುಮಕೂರು ತಾಲ್ಲೂಕು	11
1991-92	1. ಜ್ಞಾನಜ್ಯೋತಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ, ಗುಲ್ಬರ್ಗಾ	8
	2. ಜ್ಞಾನಜ್ಯೋತಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ, ನಿಂಬರ್ಗಾ	23

ಆಳಂದ ತಾಲ್ಲೂಕು.

ಒಟ್ಟು 49

ಇ ಕಳೆದ 5 ವರ್ಷಗಳಲ್ಲಿ, ಸರ್ಕಾರವು ಮೆಟ್ರಿಕ್‌ಪೂರ್ವ ವಿದ್ಯಾರ್ಥಿಗಳಿಗೆ ಊಟದ ವೆಚ್ಚವನ್ನು 100 ರೂ.ಗಳಿಂದ 150ರೂ.ಗಳಿಗೆ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ 150 ರೂ.ಗಳಿಂದ 200 ರೂ.ಗಳಿಗೆ ದಿನಾಂಕ 1-6-90 ರಿಂದ ಹೆಚ್ಚಿಸಲಾಗಿದೆ.

ಈ ಕಳೆದ 3 ವರ್ಷಗಳಿಂದ ಈ ಕೆಳಕಂಡ 5 ಅನುದಾನಿತ ವಿದ್ಯಾರ್ಥಿನಿಲಯಗಳಿಗೆ ಸರ್ಕಾರ ಮಂಜೂರು ಮಾಡಿದೆ.

1. ಮದಕರಿ ವಿದ್ಯಾರ್ಥಿನಿಲಯ, ಕೆ.ಶೆಟ್ಟಿಹಳ್ಳಿ, ಮದ್ದೂರು ತಾಲ್ಲೂಕು.
2. ಬ್ರಹ್ಮಾನಂದ ಉಚಿತ ಪ್ರಸಾದ ನಿಲಯ, ಬಳದೂಡಿ, ಗದಗ ತಾಲ್ಲೂಕು.
3. ವೆಂಕಟೇಶ್ವರ ಉಚಿತ ಪ್ರಸಾದ ನಿಲಯ,ಚಿಕ್ಕಹಂದಗೋಳ
4. ಮಡಿವಾಳೇಶ್ವರ ಉಚಿತ ಪ್ರಸಾದ ನಿಲಯ,ಕಣಗಾಳ್ ,ಬಸವನಬಾಗೇವಾಡಿ.
5. ಸೇವಾಲಾಲ್ ಉಚಿತ ಪ್ರಸಾದ ನಿಲಯ,ಹೀರೇಬೇವನೂಟ್,ಇಂಡಿ ತಾಲ್ಲೂಕು.

ಉ ಯೋಜನೆ ಇರುವುದಿಲ್ಲ.

ANNEXURE

Statement showing the No.of Grant-in-aid Institutions in the State (Districtwise.)

Sl.No.	Name of the Dist	No.	No.of strength admitted.
1.	Bangalore (u)	12	918
2.	Bangalore (R)	10	668
3.	Chitradurga	62	2960
4.	Kolar	3	146
5.	Tumkur	34	1518
6.	Shimoga	7	263
7.	Mysore	12	901
8.	Mandya	7	500
9.	Hassan	10	381
10.	Chickmagalur	3	75
11.	Coorg	-	-
12.	Dakshina Kannada	-	-
13.	Belgaum	13	794

14.	Bijapur	52	2038
15.	Dharwad	19	1047
16.	Karwar	1	25
17.	Gulbarga	18	1267
18.	Raichur	-	-
19.	Bellary	8	202
20.	Bidar	4	165
	Total	275	13,868

ಶ್ರೀ ಕೆ.ಸಿದ್ದಯ್ಯ:- ಮಾನ್ಯ ಅಧ್ಯಕ್ಷರೆ, ಗ್ರಾಂಟ್ ಇನ್ ಏಯ್ಡ್ ಹಾಸ್ಟೆಲುಗಳಲ್ಲಿ ಕಳೆದ ಮೂರು ವರ್ಷಗಳಿಂದ ಬರೀ 49 ಹುಡುಗರಿಗೆ ಮಾತ್ರ ಸೀಟ್ಸ್ ಏರಿಸಿದ್ದೀರಿ. ಹೊಸದಾಗಿ 5 ಏಡೆಡ್ ಹಾಸ್ಟೆಲುಗಳಿಗೆ ಮಂಜೂರಾತಿ ಕೊಟ್ಟಿದ್ದೀರಿ. ಆದುದರಿಂದ, ರಾಜ್ಯಾಂಗ ನಿರ್ದೇಶನದ ಪ್ರಕಾರವಾದರೂ ಇವರು ಶೈಕ್ಷಣಿಕ ವಿಚಾರದಲ್ಲಿ ಹೆಚ್ಚಿನ ಗಮನಹರಿಸಿಲ್ಲವೆಂದು ಕಾಣುತ್ತದೆ. ಇನ್ನು ಮೇಲಾದರೂ ಇದರತ್ತ ಗಮನ ಹರಿಸಿ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಜೊತೆಗೆ ಮೈಸೂರು ಜಿಲ್ಲೆಯಲ್ಲಿ ಹನ್ನೆರಡು ಗ್ರಾಂಟ್ ಇನ್ ಏಡ್ ಹಾಸ್ಟೆಲುಗಳು ಮಾತ್ರ ಇವೆ. 901 ಹುಡುಗರಿಗೆ ಮಾತ್ರ ಗ್ರಾಂಟ್ ಇನ್ ಏಡ್ ಸೀಟುಗಳಿವೆ. ಆದೇ ರೀತಿ ತುಮಕೂರಿನಲ್ಲಿ 34 ಏಡೆಡ್ ಹಾಸ್ಟಲುಗಳಿದ್ದು, 1518 ಗ್ರಾಂಟ್ ಇನ್ ಏಡ್ ಸೀಟುಗಳಿವೆ. ಚಿತ್ರದುರ್ಗ ಜಿಲ್ಲೆಯಲ್ಲಿ 62 ಗ್ರಾಂಟ್ ಇನ್ ಏಡ್ ಹಾಸ್ಟಲುಗಳಿದ್ದು, 2960 ಗ್ರಾಂಟ್ ಇನ್ ಏಡ್ ಸೀಟುಗಳಿವೆ. ಬಹುಶ: ಕರ್ನಾಟಕ ರಾಜ್ಯದಲ್ಲಿ ಮೈಸೂರು ಜಿಲ್ಲೆಯಲ್ಲಿಯೇ ಅತ್ಯಂತ ಹೆಚ್ಚು ಪರಿಶಿಷ್ಟ ಜಾತಿಯ ಜನಸಂಖ್ಯೆ ಇರತಕ್ಕಂಥದ್ದು. ಇದರಲ್ಲಿ ಏನೂ ಕಡಿಮೆಯಾಗಿಲ್ಲವಾಗಿರುವುದರಿಂದ ಹಾಗೂ ಇದುವರೆವಿಗೂ ಒಂದೂ ಮಾಡಿಲ್ಲದಿರುವುದರಿಂದ, ದಯವಿಟ್ಟು ಜಾಸ್ತಿ ಮಾಡಿ ಕೊಡುತ್ತೀರಾ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಶಿವಣ್ಣ:-ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರು ಅನುದಾನಿತ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಮಾಡಲಿ, ನಾವು ರೂಲ್ಸ್ ಪ್ರಕಾರ ರೆಕಗ್ನಿಷನ್ ಕೊಡುತ್ತೇವೆ. ಮಾನ್ಯ ಸದಸ್ಯರಿಗೆ ಎಷ್ಟು ಬೇಕೊ ಅಷ್ಟು ಅನುದಾನಿತ ವಿದ್ಯಾರ್ಥಿ ನಿಲಯಗಳನ್ನು ತೆಗೆದುಕೊಳ್ಳಬಹುದೆಂದು ಹೇಳುತ್ತಿದ್ದೇನೆ. ತಾವು ಪ್ರಪೋಸ್ ಮಾಡಿ, ನಾವು ಅದಕ್ಕೆ ಅನುಮತಿಯನ್ನು ಕೊಡುತ್ತೇವೆ.

ಶ್ರೀ ಬಾಬುರಾವ್ ಚವಾಣ್:- ಮಾನ್ಯ ಉಪಾಧ್ಯಕ್ಷಿಣಿಯವರೆ, ಅನುದಾನಿತ ವಿದ್ಯಾರ್ಥಿ ನಿಲಯಗಳನ್ನು ಎಷ್ಟು ಬೇಕೋ ಅಷ್ಟನ್ನು ಕೊಡುತ್ತೀರ ? ಒಂದು ಜಿಲ್ಲೆಯಲ್ಲಿ 5 - 10 ಅನುದಾನಿತ ವಿದ್ಯಾರ್ಥಿ ನಿಲಯಗಳು ಉದ್ಭವವಾಗುತ್ತವೆ. ಅಂಥ ವಿದ್ಯಾರ್ಥಿ ನಿಲಯಗಳೆಲ್ಲಕ್ಕೂ ತಾವು ಅನುದಾನವನ್ನು ಕೊಡುತ್ತೀರಾ?

ಶ್ರೀ ಬಿ.ಶಿವಣ್ಣ:- ನಮ್ಮ ಇಲಾಖೆಯ ರೂಲ್ಸ್ ಮತ್ತು ರೆಗ್ಯುಲೇಷನ್ಸ್‌ನ್ನು ಅನುಸರಿಸಿದರೆ ಗ್ರಾಂಟ್ ಇನ್ ಏಡ್ ಕೋಡ್ ಪ್ರಕಾರ ತಾವು ರೆಕಗ್ನಿಷನ್ ಕೊಡುತ್ತೇವೆ. ಅವರು ನಮ್ಮ ಆಕ್ಟ್‌ನ್ನು ಅನುಸರಿಸಬೇಕು.
ಶ್ರೀಬಾಬುರಾವ್ ಚವಾಣ್:- ನಾನು ಕೇಳತಕ್ಕ ಪ್ರಶ್ನೆ ಇಷ್ಟೆ, ಅಲ್ಲಿ ಹರಿಜನ ಗಿರಿಜನ ಮಕ್ಕಳಿಗೆ ಊಟವನ್ನು ಕೊಡಬೇಕು. ನೀವು ಅಲ್ಲಿ ಇಷ್ಟು ಹುಡುಗರಿಗೆ ಊಟವನ್ನು ಕೊಡುತ್ತೇವೆಂದು ಹೇಳುತ್ತಿದ್ದೀರೋ ಅಥವಾ ಬಂದಂಥ ಎಲ್ಲಾ ವಿದ್ಯಾರ್ಥಿಗಳಿಗೂ ಊಟವನ್ನು ಕೊಡುತ್ತೀರಾ ? ತಾವು ನಿಯಮಗಳನ್ನು ಮಾಡುತ್ತೀರಿ ಎನ್ನುವುದು ನಮಗೂ ಗೊತ್ತು. ಆದರೆ ನಾನು ಕೇಳುವುದೇನೆಂದರೆ, ಅಪ್ಲಿಕೇಷನ್ ಬಂದಂಥ ಎಲ್ಲರಿಗೂ ಊಟವನ್ನು ಕೊಡುತ್ತೀರೋ ಅಥವಾ ಲಿಮಿಟೆಡ್ ಆಗಿ ಹುಡುಗರಿಗೆ , ಊಟವನ್ನು ಕೊಡುತ್ತೀರೋ ?

ಶ್ರೀ ಬಿ.ಶಿವಣ್ಣ :- ಮಾನ್ಯ ಉಪಾಧ್ಯಕ್ಷೆಯವರೇ, ವಿದ್ಯಾರ್ಥಿ ನಿಲಯಗಳನ್ನು ತೆರೆಯಬೇಕೆನ್ನುವುದು ಸರ್ಕಾರದ ನೀತಿ. ಆದರೆ ಎಲ್ಲಾ ಕಡೆಗಳಲ್ಲಿಯೂ ವಿದ್ಯಾರ್ಥಿ ನಿಲಯಗಳನ್ನು ತೆರೆಯಬೇಕೆಂದಿಲ್ಲ. ಏಕೆಂದರೆ, ಅದು ನಮ್ಮ ಆರ್ಥಿಕ ಪರಿಸ್ಥಿತಿ ಮತ್ತು ಅನುಕೂಲಗಳನ್ನು ಅವಲಂಬಿಸಿರುತ್ತದೆ. ಮಾನ್ಯ ಸದಸ್ಯರು ಹೇಳಿದಂತೆ ಬಹಳ ಒತ್ತಡ, ತೊಂದರೆ ಎಲ್ಲಿ ಇರುತ್ತದೆ ಅಂಥ ಕಡೆ ಪರವಾನಿಗಿಯನ್ನು ಕೇಳಿಕೊಂಡರೆ ಕನ್ಸಿಡರ್ ಮಾಡಬಹುದೆಂದು ಅನಿಸುತ್ತದೆ..

ಶ್ರೀ ಕೆ.ಸಿದ್ದಯ್ಯ :- ಅನುದಾನಿತ ವಿದ್ಯಾರ್ಥಿ ನಿಲಯಗಳಿಗೆ ನಿವೇಶನವನ್ನಾದರೂ ಸಹ ಒದಗಿಸಿಕೊಡಬೇಕೆಂದು ಕೇಳುತ್ತೇನೆ. ಅದಕ್ಕೆ ಯೋಜನೆ ಇಲ್ಲ ಎಂದು ಹೇಳಿದ್ದೀರಿ, ಇನ್ನು ಮೇಲಾದರೂ ಒಂದು ಯೋಜನೆಯನ್ನು ಮಾಡಿಕೊಟ್ಟರೆ ಬಡವರು ಮತ್ತು ಕೂಲಿಕಾರರು ಏನಾದರೂ ಏಡೆಡ್ ಹಾಸ್ಪೆಲ್‌ಗಳನ್ನಾದರೂ ಮಾಡಿಕೊಳ್ಳುತ್ತಾರೆ. ಆದ್ದರಿಂದ ಇನ್ನು ಮುಂದಾದರೂ ಇಂತಹ ಒಂದು ಯೋಜನೆಯನ್ನಾದರೂ ಹಾಕಿಕೊಂಡು ಕೆಲಸ ಮಾಡುತ್ತೀರ.

ಶ್ರೀ ಬಿ.ಶಿವಣ್ಣ :- ಅಂಥ ಯಾವುದೇ ಯೋಜನೆಯು ಇಲ್ಲ.

ವಿಷಯ:- ರಾಜ್ಯದ ವಿವಿಧ ಆಸ್ಪತ್ರೆಗಳಿಗೆ ಔಷಧ ಖರೀದಿಗಾಗಿ ಮಂಜೂರಾದ ಹಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 472 (2320)

ಶ್ರೀ ಸಾಧತ್ ಅಲಿ ಖಾನ್ (ಚನ್ನಪಟ್ಟಣ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.?

ಅ 1988 ರಿಂದ ಇಂದಿನವರೆಗೆ ರಾಜ್ಯದ ವಿವಿಧ ಆಸ್ಪತ್ರೆಗಳಿಗೆ ಔಷಧ ಖರೀದಿಗಾಗಿ ಮಂಜೂರಾದ ಹಣವೆಷ್ಟು? (ವರ್ಷವಾರು ವಿವರ ನೀಡುವುದು)

ಆ ಈ ಬಾಬ್ತಿಗಾಗಿ ಜಿಲ್ಲಾ ಪರಿಷತ್‌ಗಳಿಗೆ ಮಂಜೂರಾದ ಅನುದಾನ.

ಇ 1988-89 ರಿಂದ 91ರವರೆಗೆ ಸಾರ್ವಜನಿಕ ಆಸ್ಪತ್ರೆ ಚನ್ನಪಟ್ಟಣ ಇಲ್ಲಿಗೆ ಔಷಧ ಮತ್ತು ಪೀಠೋಪಕರಣಗಳ ಖರೀದಿಗಾಗಿ ಬಿಡುಗಡೆಯಾದ ಹಣವೆಷ್ಟು? (1988-89 ರಿಂದ 1991ರವರೆಗೆ ವಿವರ ನೀಡುವುದು)

ಈ ಜಿಲ್ಲಾ ಪರಿಷತ್ತು ವಿವಿಧ ಆಸ್ಪತ್ರೆಗಳಿಗೆ ವಿಶೇಷವಾಗಿ ಚನ್ನಪಟ್ಟಣದ ನೂರು ಹಾಸಿಗೆ ಆಸ್ಪತ್ರೆಗೆ ಪೀಠೋಪಕರಣಗಳನ್ನು ಖರೀದಿಸುವಾಗ ಹಣದ ದುರುಪಯೋಗ ಮಾಡಿಕೊಂಡಿರುವುದು ನಿಜವೆ?

ಉ ಹಾಗಾದರೆ ಈ ಸಂಬಂಧದಲ್ಲಿ ಸರ್ಕಾರವು ಕೈಗೊಂಡ ಕ್ರಮವೇನು?

ಶ್ರೀ ಜಿ.ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ ಔಷಧ ಸರಬರಾಜಿಗಾಗಿ ಸರ್ಕಾರಿ ಔಷಧ ಮಳಿಗೆಗೆ ಬಿಡುಗಡೆಯಾದ ಅನುದಾನ (ಶೇ.60 ರಷ್ಟು)

1988-89	ರೂ. 1296-55 ಲಕ್ಷಗಳು
1989-90	ರೂ. 758-31 ಲಕ್ಷಗಳು
1990-91	ರೂ. 832-25 ಲಕ್ಷಗಳು
1991-92	ರೂ. 1482-05 ಲಕ್ಷಗಳು

ಆ

1988-89	ರೂ. 572-66 ಲಕ್ಷಗಳು
1989-90	ರೂ. 572-66 ಲಕ್ಷಗಳು
1990-91	ರೂ. 572-66 ಲಕ್ಷಗಳು
1991-92	ರೂ. 735-00 ಲಕ್ಷಗಳು

ಇ ಔಷಧಗಳು ಪೀಠೋಪಕರಣಗಳು